15 JUN 2017



ದಿನಾಂಕ 06-06-2017 ರ ಮಂಗಳವಾರ ಬೆಳಿಗ್ಗೆ 11-00 ಗಂಟೆಗೆ ಪಾಂಡವಪುರ ಉಪವಿಭಾಗ ಕಛೇರಿಯ ಆವರಣದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

ಹಾಜರಿದ್ದ ಅಧಿಕಾರಿಗಳು / ನೌಕರರು
ಶ್ರೀಯುತ:

| | | | |
|---|---|---|---|
| 1. | ಎ.ಎನ್. ರವಿಶಂಕರ್ | : | ಪ್ರಭಾರ ಅಇಂ(ವಿ), ಮಂಡ್ಯ ವೃತ್ತ. |
| 2. | ಇ. ರವಿಶಂಕರ್ | : | ಕಾನಿಇಂ(ವಿ), ಮಂಡ್ಯ ವೃತ್ತ. |
| 3. | ಎನ್. ಶ್ರೀನಿವಾಸಮೂರ್ತಿ | : | ಕಾನಿಇಂ(ವಿ), ಪಾಂಡವಪುರ ವಿಭಾಗ. |
| 4. | ಎಂ. ಪ್ರಕಾಶ್ | : | ಲೆಕ್ಕಾಧಿಕಾರಿ, ಪಾಂಡವಪುರ ವಿಭಾಗ. |
| 5. | ಮಹದೇವಪ್ಪ | : | ಲೆಕ್ಕಾಧಿಕಾರಿ, ಆಂ.ಪ., ಪಾಂಡವಪುರ ವಿಭಾಗ. |
| 6. | ವಿ. ಪುಟ್ಟಸ್ವಾಮಿ | : | ಸಕಾನಿಇಂ(ವಿ), ಪಾಂಡವಪುರ ಉಪವಿಭಾಗ. |
| 7. | ಜೆ. ಚೇತನ್ | : | ಪ್ರ: ಸಇಂ(ತಾಂ), ಪಾಂಡವಪುರ ಉಪವಿಭಾಗ. |
| 8. | ಹೆಚ್.ಇ. ಮಹದೇವ | : | ಸಇಂ(ವಿ), ಪಟ್ಟಣ ಶಾಖೆ, ಪಾಂಡವಪುರ ಉಪವಿಭಾಗ. |
| 9. | ಬಿ. ನಂದೀಶ್ | : | ಪ್ರಭಾರ ಸಇಂ(ವಿ), ಟಿ.ಎಸ್. ಛತ್ರ ಶಾಖೆ. |
| 10. | ಎನ್. ಪ್ರಶಾಂತ್ ಕುಮಾರ್ | : | ಸಇಂ(ವಿ), ಮೇಲುಕೋಟೆ ಶಾಖೆ. |
| 11. | ಬಿ. ಮೂರ್ತಿ | : | ಪ್ರಭಾರ ಕಿಇಂ(ವಿ), ಕ್ಯಾತನಹಳ್ಳಿ ಶಾಖೆ. |
| 12. | ವಿ. ಕೃಷ್ಣಮೂರ್ತಿ | : | ಪ್ರಭಾರ ಕಿಇಂ(ವಿ), ಬನ್ನಂಗಾಡಿ ಶಾಖೆ. |
| 13. | ಎಂ.ಬಿ. ಚಲುವರಾಜು | : | ಪ್ರಭಾರ ಕಿಇಂ(ವಿ), ಚಿನಕುರಳಿ ಶಾಖೆ. |
| 14. | ಎಲ್. ಕೃಷ್ಣರಂಗರಾಜು | : | ಕಿಇಂ(ವಿ), ಮಾಣಿಕ್ಯನಹಳ್ಳಿ ಶಾಖೆ. |
| 15. | ವಿ. ಕುಮಾರಸ್ವಾಮಿ | : | ಪ್ರಭಾರ ಕಿಆಸ., ಪಾಂಡವಪುರ ವಿಭಾಗ. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಪಾಂಡವಪುರ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ / ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆಯನ್ನು ನಡೆಸುವಂತೆ KERC ರವರಿಂದ ಆದೇಶವಾಗಿರುತ್ತದೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ವಿದ್ಯುತ್ ಬಳಕೆದಾರರ ಒಪ್ಪಿಗೆಯ ಅವಶ್ಯಕತೆ ಇರುತ್ತದೆ. ಶಾಖಾಧಿಕಾರಿಗಳು ವಿದ್ಯುತ್ ಬಳಕೆದಾರರ ಸಮಸ್ಯೆಗಳಿಗೆ ಸ್ಪಂದಿಸುವ ಕುರಿತು ಹಾಗೂ ಗ್ರಾಹಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ ರವರು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ / ಲಿಖಿತವಾಗಿ ಸಲ್ಲಿಸಿಕೊಳ್ಳುವಂತೆ ವಿದ್ಯುತ್ ಗ್ರಾಹಕರಲ್ಲಿ / ಸಾರ್ವಜನಿಕರಲ್ಲಿ ಕೇಳಲಾಯಿತು.

ಸದರಿ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಗ್ರಾಹಕರ ಮೌಖಿಕವಾಗಿ ತಿಳಿಸಿದ / ಲಿಖಿತ ಮನವಿಗಳಲ್ಲಿ ಉಲ್ಲೇಖಿಸಿರುವ ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಭೆಯಲ್ಲಿ ತೆಗೆದುಕೊಂಡ / ತೆಗೆದುಕೊಳ್ಳಬೇಕಾದ ತೀರ್ಮಾನಗಳು ಈ ಕೆಳಕಂಡಂತೆ ಇರುತ್ತವೆ.

S.E.E (Elecl) Works Circle CESC Mandya
DCA
EEE(O) CAO(C)
AO Dvn.
AO (I/A)
S.E.E (Elecl)

1. ಶ್ರೀ ಯೋಗಣ್ಣ, ಬೆಳ್ಳಾಳೆ ಗ್ರಾಮ, ಮೊಬೈಲ್ ನಂ. 98808 69370.

ದೂರು: ಮಾಣಿಕ್ಯನಹಳ್ಳಿ ಶಾಖಾ ವ್ಯಾಪ್ತಿಯಲ್ಲಿ ಸುಮಾರು ವರ್ಷಗಳಿಂದ ಐ.ಪಿ. ಫೀಡರ್‌ಗಳ ಜಂಗಲ್ ಕ್ಲಿಯರ್ ಮಾಡುತ್ತಿಲ್ಲವೆಂದು ಹಾಗೂ ಪರಿವರ್ತಕ ಕೆಟ್ಟು ಹೋದಾಗ ಮಾತ್ರ ಜಂಗಲ್ ಕ್ಲಿಯರ್ ಮಾಡುತ್ತಾರೆ. ಇದರಿಂದಾಗಿ ಪರಿವರ್ತಕಗಳು ಕೆಟ್ಟು ಹೋಗುತ್ತಿರುವುದಾಗಿ ತಿಳಿಸಿರುತ್ತಾರೆ.

<u>ಕ್ರಮ:</u> ಹಾಲಿ ಹೊಸದಾಗಿ ನೇಮಕಗೊಂಡಿರುವ ಕಿರಿಯ ಮಾರ್ಗದಾಳು ಸಿಬ್ಬಂದಿಗಳಿಗೆ ಜಂಗಲ್ ಕ್ಲಿಯರ್ ಮಾಡುವ ಕೆಲಸಗಳನ್ನು ನಿರ್ವಹಿಸಲು ಸೂಚಿಸಲಾಗಿರುತ್ತದೆ. ಮಾಣಿಕ್ಯನಹಳ್ಳಿ ಶಾಖಾಧಿಕಾರಿಗಳಿಗೆ ಮಾರ್ಗಗಳನ್ನು ತಪಾಸಣೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ನಿರ್ದೇಶನ ನೀಡಲಾಯಿತು.

2. <u>ಶ್ರೀ ಶಿವಣ್ಣ, ಡಾಮಡಹಳ್ಳಿ ಗ್ರಾಮ, ಮೊಬೈಲ್ ನಂ. 98449 44374.</u>

<u>ದೂರು:</u> ಈ ಹಿಂದೆ ಪೌಲ್ಟ್ರಿ ಫಾರಂಗೆ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿದ್ದು ನಂತರ 2012 ನೇ ಇಸವಿಯಲ್ಲಿ ಡಿಸ್ ಮಾಡಿಸಿಕೊಳ್ಳಲಾಗಿರುತ್ತದೆ. ಠೇವಣಿ ಕಟ್ಟಿರುವ ರಶೀದಿ ಕಳೆದು ಹೋಗಿದ್ದು, ಠೇವಣಿ ಹಣವನ್ನು ವಾಪಸ್ ಮಾಡುವಂತೆ ಅರ್ಜಿ ನೀಡಿದ್ದರೂ ಸಹ ದಾಖಲೆ ಇಲ್ಲದೇ ಮರು ಪಾವತಿ ಮಾಡಲು ಸಾಧ್ಯವಿಲ್ಲವೆಂದು ಉಪವಿಭಾಗದಲ್ಲಿ ತಿಳಿಸಿರುತ್ತಾರೆ ಎಂದು ತಿಳಿಸಿ ಠೇವಣಿ ಹಣವನ್ನು ಕೊಡಿಸುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಮುಂದಿನ ದಿನಗಳಲ್ಲಿ ರಶೀದಿ ಸಿಕ್ಕಿದರೂ ಪುನಃ ಠೇವಣಿ ಹಣವನ್ನು ಕೇಳುವುದಿಲ್ಲವೆಂದು ₹ 100/- ಗಳ ಛಾಪಾ ಕಾಗದದಲ್ಲಿ ಅಫಿಡವಿಟ್ ಸಲ್ಲಿಸಿದಲ್ಲಿ ಠೇವಣಿ ಹಣವನ್ನು ವಾಪಸ್ ಕೊಡಲು ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಲಾಯಿತು.

3. <u>ಶ್ರೀ ಎಲ್.ಕೆ. ಚಿಕ್ಕಹನುಮಂತೇಗೌಡ, ಲಕ್ಕೀಸಾಗರ ಗ್ರಾಮ, ಮೊಬೈಲ್ ನಂ. 97411 21774.</u>

<u>ದೂರು:</u> ಪಂಪ್‌ಸೆಟ್‌ಗಾಗಿ ಬೋರ್ ಕೊರೆಸಲಾಗಿದ್ದು, ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ರಾಜ್ಯದಲ್ಲಿ ಹಾಲಿ ಬರ ಪರಿಸ್ಥಿತಿ ಇರುವುದರಿಂದ ಸಾರ್ವಜನಿಕರಿಗೆ ಕುಡಿಯುವ ನೀರು ಸರಬರಾಜು ಮಾಡುವ ನಿಟ್ಟಿನಲ್ಲಿ 500 ಮೀಟರ್ ವ್ಯಾಪ್ತಿಯ ಒಳಗೆ ಬರುವ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬಾರದೆಂದು ಸರ್ಕಾರದಿಂದ ಆದೇಶವಿರುತ್ತದೆ. ಇದರ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ರವರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಸಮಿತಿಯಲ್ಲಿ ಚರ್ಚೆಯಾಗಿ ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕುಡಿಯುವ ನೀರು ಸರಬರಾಜು ಸ್ಥಾವರದಿಂದ ಪಂಪುಸೆಟ್ಟುಗಳು 500 ಮೀಟರ್‌ನಿಂದ ಹೊರಗಡೆ ಇರುವುದಾಗಿ ತಿಳಿಸಿ ದೃಢೀಕರಣ ನೀಡಿದಲ್ಲಿ ಮಾತ್ರ ಸದರಿ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಲಾಯಿತು.

4. <u>ಶ್ರೀ ಸಂತೋಷ್, ಟಿ.ಎಸ್. ಛತ್ರ ಗ್ರಾಮ, ಮೊಬೈಲ್ ನಂ. 96327 7474.</u>

<u>ದೂರು:</u> ಟಿ.ಎಸ್. ಛತ್ರ ಗ್ರಾಮದ ಮುಖ್ಯ ರಸ್ತೆ – ವೃತ್ತದ ಬಳಿಯಲ್ಲಿರುವ ನಿವೇಶನದ ಮೇಲೆ 11 ಕೆವಿ ಮಾರ್ಗ ಹಾದು ಹೋಗಿದ್ದು, ಮಾರ್ಗದ ತಂತಿಗಳು ಜೋತು ಬಿದ್ದಿದ್ದು, ಇವನ್ನು ಸರಿಪಡಿಸಿಕೊಡುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಇದರ ಬಗ್ಗೆ ಚರ್ಚಿಸಲಾಗಿ ಕೂಡಲೇ ಸ್ಥಳ ಪರಿಶೀಲನೆ ಮಾಡಿ ಮಧ್ಯಂತರ ಕಂಬಗಳನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ಉಪವಿಭಾಗಾಧಿಕಾರಿಗಳ ಮುಖಾಂತರ ವಿಭಾಗೀಯ ಕಛೇರಿಗೆ ಸಲ್ಲಿಸುವಂತೆ ಶಾಖಾಧಿಕಾರಿ, ಟಿ.ಎಸ್. ಛತ್ರ ಶಾಖೆ ರವರಿಗೆ ಸೂಚಿಸಲಾಯಿತು.

5. <u>ಶ್ರೀ ಕೆ. ಬೆಟ್ಟೇಗೌಡ, ಹರಳಹಳ್ಳಿ ಗ್ರಾಮ, ಮೊಬೈಲ್ ನಂ. 99641 81482.</u>

<u>ದೂರು:</u> ಐ.ಪಿ. ಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಳ್ಳಲು 2 ತಿಂಗಳ ಹಿಂದೆಯೇ ಕಂಬಗಳನ್ನು ನೆಡಲಾಗಿದ್ದು, ಇದುವರೆವಿಗೂ ಕೆಲಸ ಪೂರ್ಣಗೊಂಡಿಲ್ಲ, ಕೂಡಲೇ ಮುಗಿಸಿಕೊಡುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಇದರ ಬಗ್ಗೆ ಚರ್ಚಿಸಲಾಗಿ ಸದರಿ ಕಾಮಗಾರಿಯು E&I ಅಡಿಯಲ್ಲಿ ನಡೆಯುತ್ತಿದ್ದು, ರ್‍ಯಾಬಿಟ್ ವಾಹಕ ಉಗ್ರಾಣದಲ್ಲಿ ಲಭ್ಯ ಇರುವುದಿಲ್ಲ. ಹಾಲಿ ಮೇಲಧಿಕಾರಿಗಳ ಆದೇಶದಂತೆ ಲೇಬರ್ ಅವಾರ್ಡ್ ಪಡೆದ ಗುತ್ತಿಗೆದಾರರೇ ವಾಹಕವನ್ನು CESC Vendor Approved ಆಗಿರುವ ಕಂಪನಿಯವರಿಂದ ಖರೀದಿಸಿ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮೇಲಧಿಕಾರಿಗಳ ಅನುಮೋದನೆ ಅವಶ್ಯಕತೆ ಇರುವುದರಿಂದ ಇದರ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಉಪವಿಭಾಗಾಧಿಕಾರಿ / ಶಾಖಾಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

6. <u>ಶ್ರೀ ಸಂತೋಷ್, ಚಿಕ್ಕಯಾರಹಳ್ಳಿ ಗ್ರಾಮ, ಮೊಬೈಲ್ ನಂ. 84970 10448.</u>

<u>ದೂರು:</u> ಪಂಪ್‌ಸೆಟ್‌ಗಾಗಿ ಎರಡು ವರ್ಷದ ಹಿಂದೆಯೇ ಬೋರ್ ಕೊರೆಸಿದ್ದು, ಅಕ್ರಮ ಸಕ್ರಮ ಯೋಜನೆ ಅಡಿಯಲ್ಲಿ ಹಣವನ್ನು ಪಾವತಿಸಲಾಗಿರುತ್ತದೆ. ಇದುವರೆವಿಗೂ ವಿದ್ಯುತ್ ಸಂಪರ್ಕ ಕಲ್ಪಿಸಿರುವುದಿಲ್ಲ, ಕೂಡಲೇ ವಿದ್ಯುತ್ ಸಂಪರ್ಕ ಕಲಿಸುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಅಕ್ರಮ ಸಕ್ರಮ ಯೋಜನೆ ಅಡಿಯಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗಳ ಜೇಷ್ಠತಾ ಪಟ್ಟಿಯನ್ನು ವಿಭಾಗೀಯ ಕಛೇರಿಯ ನಾಮ ಫಲಕದಲ್ಲಿ ಹಾಕಲಾಗಿದ್ದು, ಜೇಷ್ಠತೆಯಂತೆ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು.

7. <u>ಶ್ರೀ ಶಿವಣ್ಣ, ಡಿಂಕಾಶೆಟ್ಟಹಳ್ಳಿ ಗ್ರಾಮ, ಮೊಬೈಲ್ ನಂ. 97414 49476.</u>

<u>ದೂರು:</u> ಮೂರು ದಿನಗಳ ಹಿಂದೆಯೇ 25 ಕೆವಿಎ ಪರಿವರ್ತಕ ಸುಟ್ಟಿದ್ದು, ಬದಲಾಯಿಸಿಕೊಡುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಇದರ ಸಂಬಂಧವಾಗಿ ಕೂಡಲೇ ಅಂದಾಜುಪಟ್ಟಿಯನ್ನು ಸಲ್ಲಿಸುವಂತೆ ಶಾಖಾಧಿಕಾರಿ, ಬನ್ನಂಗಾಡಿ ಶಾಖೆ ರವರಿಗೆ ನಿರ್ದೇಶನ ನೀಡಲಾಯಿತು ಮತ್ತು ಸದರಿ ಪರಿವರ್ತಕವನ್ನು ಶೀಘ್ರವಾಗಿ ಬದಲಾಯಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು.

8. <u>ಶ್ರೀ ಮಹದೇವಪ್ಪ, ಟಿ.ಎಸ್. ಛತ್ರ ಗ್ರಾಮ, ಮೊಬೈಲ್ ನಂ. 99643 65921.</u>

<u>ದೂರು:</u> 100 ಕೆವಿಎ ಪರಿವರ್ತಕ ಸುಟ್ಟಿದ್ದು, ಬದಲಾಯಿಸಿಕೊಡುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ವಿಭಾಗೀಯ ಉಗ್ರಾಣದಲ್ಲಿ ಪರಿವರ್ತಕ ಲಭ್ಯವಿದ್ದು, ಇಂದೇ ಕೊಡಲಾಗುವುದಾಗಿ ತಿಳಿಸಲಾಯಿತು.

9. <u>ಶ್ರೀ ಕಾರ್ತಿಕ್, ಹರಳಹಳ್ಳಿ ಗ್ರಾಮ, ಮೊಬೈಲ್ ನಂ. 89700 00147.</u>

<u>ದೂರು:</u> ಹರಳಹಳ್ಳಿ ಗ್ರಾಮದಲ್ಲಿರುವ ಕುಡಿಯುವ ನೀರು ಸರಬರಾಜು ಘಟಕಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಕುಡಿಯುವ ನೀರು ಸರಬರಾಜು ಘಟಕಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸಂಬಂಧಪಟ್ಟ ಪಂಚಾಯತ್ ರಾಜ್ ಇಂಜಿನಿಯರಿಂಗ್ ವತಿಯಿಂದ ಅರ್ಜಿ ನೊಂದಣಿ ಮಾಡಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು.

10. <u>ಶ್ರೀ ಮಹೇಶ್, ಬೆಳ್ಳಾಳೆ ಗ್ರಾಮ, ಮೊಬೈಲ್ ನಂ. 99022 39466.</u>

<u>ದೂರು:</u> 100 ಕೆವಿಎ ಐ.ಪಿ. ಪರಿವರ್ತಕದ ಮೇಲೆ ಸುಮಾರು 20 ಸಂಖ್ಯೆ ಐ.ಪಿ. ಸೆಟ್‌ಗಳು ಇದ್ದು, ಇದರಲ್ಲಿ 16 ಸಂಖ್ಯೆ ಐ.ಪಿ. ಸೆಟ್‌ಗಳು ಅಧಿಕೃತವಾಗಿವೆ. ಹಾಲಿ ಓವರ್ ಲೋಡ್ ಆಗುತ್ತಿರುವುದರಿಂದ ವಿದ್ಯುತ್ ಸರಬರಾಜಿನಲ್ಲಿ ತೊಂದರೆ ಉಂಟಾಗುತ್ತಿದ್ದು, ಇದನ್ನು ಸರಿಪಡಿಸಿಕೊಡುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಕೂಡಲೇ ಸ್ಥಳ ಪರಿಶೀಲಿಸಿ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಕ್ರಮೀಕರಣಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ, ಮಾಣಿಕ್ಯನಹಳ್ಳಿ ಶಾಖೆ ರವರಿಗೆ ಸೂಚಿಸಲಾಯಿತು.

11. <u>ಶ್ರೀ ಕೆ.ಟಿ. ವಿಶ್ವನಾಥ್, ಕೆಮ್ಮಾಳು ಗ್ರಾಮ, ಮೊಬೈಲ್ ನಂ. 99451 97537.</u>

<u>ದೂರು:</u> ನೆಲಮನೆ ರಸ್ತೆಯ ಪಾಂಡವಪುರ ರೈಲ್ವೆ ನಿಲ್ದಾಣದ ಸೇತುವೆಯ Underground ನಲ್ಲಿ ಬೀದಿ ದೀಪ ಇರುವುದಿಲ್ಲ. ಇದರಿಂದ ಸಾರ್ವಜನಿಕರು ಓಡಾಡಲು ತೊಂದರೆಯಾಗಿದ್ದು, ಬೀದಿ ದೀಪಗಳನ್ನು ಅಳವಡಿಸಿಕೊಡುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಬೀದಿ ದೀಪಗಳನ್ನು ಆಳವಡಿಸುವುದು ಸಂಬಂದಪಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡಲಿದ್ದು, ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀ ಕೆ.ಟಿ. ವಿಶ್ವನಾಥ್ ರವರಿಂದ ಲಿಖಿತ ಮನವಿಯನ್ನು ಪಡೆದುಕೊಳ್ಳಲಾಗಿ, ಸಾರ್ವಜನಿಕ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು.

12. <u>ಶ್ರೀ ಹೆಚ್. ರವಿ, ಕೆ. ಹೊಸೂರು ಗ್ರಾಮ, ಮೊಬೈಲ್ ನಂ. 90080 71799.</u>

<u>ದೂರು:</u> ಕೋಡಳ್ಳಿ ಹೊಸೂರು ಗ್ರಾಮದಲ್ಲಿರುವ ಕುಡಿಯುವ ನೀರು ಸರಬರಾಜು ಘಟಕಕ್ಕೆ ಪರಿವರ್ತಕ ಅಳವಡಿಸಲಾಗಿದ್ದು, ಇದಕ್ಕೆ ಐ.ಪಿ.ಸೆಟ್ ಗ್ರಾಹಕರು ವಿದ್ಯುತ್ ಸಂಪರ್ಕ ಕಲ್ಪಿಸಿಕೊಳ್ಳುತ್ತಿದ್ದು, ಈ ಐ.ಪಿ. ಸೆಟ್‌ಗಳ ವಿದ್ಯುತ್ ಸಂಪರ್ಕವನ್ನು ತೆಗೆದರೂ ಸಹ ಪುನಃ ಹಾಕಿಕೊಳ್ಳುತ್ತಿದ್ದಾರೆ. ಇದರಿಂದಾಗಿ ತೊಂದರೆ ಉಂಟಾಗುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿರುತ್ತಾರೆ.

<u>ಕ್ರಮ:</u> ಐ.ಪಿ. ಸೆಟ್‌ಗಳಿಗೆ ಪ್ರತ್ಯೇಕವಾಗಿ 25 ಕೆವಿಎ ಪರಿವರ್ತಕವನ್ನು ಅಳವಡಿಸಿಕೊಡಲು ಆಗತ್ಯ ಕ್ರಮ ತೆಗೆದುಕೊಳ್ಳುವಂತೆ ಶಾಖಾಧಿಕಾರಿ, ಟಿ.ಎಸ್. ಛತ್ರ ಶಾಖೆ ರವರಿಗೆ ಸೂಚಿಸಲಾಯಿತು.

13. <u>ಶ್ರೀ ಶಿವಕುಮಾರ್, ಮಾಡ್ರಹಳ್ಳಿ ಗ್ರಾಮ, ಮೊಬೈಲ್ ನಂ. 96115 53033.</u>

<u>ದೂರು:</u> ಐ.ಪಿ. ಪರಿವರ್ತಕ ಓವರ್ ಲೋಡ್ ಆಗಿದ್ದು, ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಸ್ವಯಂ ಕಾರ್ಯನಿರ್ವಹಣೆ ಅಡಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಂಡಲ್ಲಿ ಅಂದರೆ ಕಂಬ ಮತ್ತು ವಾಹಕವನ್ನು ಅಳವಡಿಸಿಕೊಂಡಲ್ಲಿ ನಿಗಮದ ವತಿಯಿಂದ ಶೀಘ್ರ ವಿದ್ಯುತ್ ಯೋಜನೆಯಲ್ಲಿ ಉಚಿತವಾಗಿ 25 ಕೆವಿಎ ಪರಿವರ್ತಕವನ್ನು ಅಳವಡಿಸಿಕೊಡುವುದಾಗಿ ತಿಳಿಸಲಾಯಿತು. ಇದಕ್ಕೂ ಮುನ್ನ ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕುಡಿಯುವ ನೀರು ಸರಬರಾಜು ಸ್ಥಾವರದಿಂದ ಪಂಪುಸೆಟ್ಟು 500 ಮೀಟರ್‌ನಿಂದ ಹೊರಗಡೆ ಇರುವುದಾಗಿ ತಿಳಿಸಿ ದೃಢೀಕರಣ ನೀಡಬೇಕಾಗಿರುತ್ತದೆ.

ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನ ಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

:: ಸಭೆಯನ್ನು ಮಧ್ಯಾಹ್ನ 01-30 ಗಂಟೆಗೆ ಮುಕ್ತಾಯಗೊಳಿಸಲಾಯಿತು ::

ಮೆಮೊ ಸಂಖ್ಯೆ: ಕಾನಿಇಂ(ವಿ)/ಕಿಆಸ/ಪಾ.ಪುರ/17-18/CYS-90 ದಿನಾಂಕ: 09-06-2017

ಪ್ರತಿಯನ್ನು ಇವರ ಅವಗಾಹನೆಗೆ ಸಲ್ಲಿಸಲಾಗಿದೆ:

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ, ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ, ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ.

ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ:

1. ಲೆಕ್ಕಾಧಿಕಾರಿ, ಸೆಸ್ಕ್, ಪಾಂಡವಪುರ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಪಾಂಡವಪುರ.
3. ಲೆಕ್ಕಾಧಿಕಾರಿ, ಆಂ.ಪ., ಸೆಸ್ಕ್, ಪಾಂಡವಪುರ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಪಾಂಡವಪುರ.
5. ಶಾಖಾಧಿಕಾರಿ, ಸೆಸ್ಕ್, ಕಾರ್ಯ ಮತ್ತು ಪಾಲನಾ ಶಾಖೆ, ಪಟ್ಟಣ (ಪಾಂಡವಪುರ) / ಟಿ.ಎಸ್. ಛತ್ರ / ಚಿನಕುರಳಿ / ಕ್ಯಾತನಹಳ್ಳಿ / ಬನ್ನಂಗಾಡಿ / ಮೇಲುಕೋಟೆ / ಮಾಣಿಕ್ಯನಹಳ್ಳಿ.
6. ಕಿಆಸ / ಮುಕ.

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಪಾಂಡವಪುರ ವಿಭಾಗ.